ಹೇಗೋ ಅವನು ಇದ್ದ ಇಷ್ಟಗಲ ಜಾಗೆಯಲ್ಲಿ ಅಷ್ಟೆಲ್ಲವನ್ನೂ ಮಾಡಿ ಬಿಕರಿಗಿಡುತ್ತಿದ್ದ. ಸಾಲದಕ್ಕೆ ಅವನ ಅಡುಗೆಗೊಂದು ವಿಶೇಷ ರುಚಿಯೂ ಪರಿಮಳವೂ ಇರುತ್ತಿದ್ದವು. ನಾನು ಬಾಪುಟ್ಟಿಯೂ, ಸ್ವಲ್ಪ ದೊಡ್ಡವರಾದ ಮೇಲೆ ಹೇಗಾದರೂ ಒಂದಷ್ಟು ಕಾಸು ಹೊಂದಿಸಿಕೊಂಡು ಆಗೀಗ ಅವನ ಹೋಟೆಲಿಗೆ ಹೋಗಿ ಪರೋಟಾ ಮುಟ್ಟ ಕರಿ ತಿಂದು ಬರುತ್ತಿದ್ದೆವು. ಅಲ್ಲಿ ನಮಗಿದ್ದ ಮತ್ತೊಂದು ಆಕರ್ಷಣೆ ನಾಯರ ಮಗಳು ಪ್ರಭಾ. ಅವಳಿಗೂ ಹೆಚ್ಚುಕಮ್ಮಿ ನಮ್ಮದೇ ವಯಸ್ಸು. ಅವಳ ಮನೆಯ ಹಿತ್ತಿಲಿನಲ್ಲಿ ಬೆಳೆದ ಬಿಳೀ ದಾಸವಾಳದ ಹೂಗಳನ್ನೂ, ಎಲೆಗಳನ್ನೂ ಗಸಗಸ ತಿಕ್ಕಿ ಕಡೆದು, ತಲೆಗೆ ಹಚ್ಚಿಕೊಂಡು ಸ್ನಾನ ಮಾಡಿ, ಉದ್ದೋಉದ್ದ ಕೂದಲನ್ನು ಎರಡೆಳೆ ಎತ್ತಿ ಕಟ್ಟಿ ಬೆನ್ನಿಗೆ ಹರವಿ ಗಾಳಿಗೆ ಹಾರಬಿಟ್ಟಳೆಂದರೆ ಊರ ದೆಯ್ಯ ದೇವರು ಕೂಡ ನಿಂತು ನೋಡಬೇಕು ಅಷ್ಟು ಚಂದ ಕಾಣುತ್ತಿತ್ತು. ದಿನಾ ಸಂಜೆ ಅವಳು ಕೊಡ ಮುಂದೆ ಮಾಡಿಕೊಂಡು, ಕೂದಲು ಇಳಿ ಬಿಟ್ಟುಕೊಂಡು ಹೊಳೆಯಿಂದ ನೀರು ತರುವುದನ್ನು ನಾನೂ ಬಾಪುಟ್ಟಿಯೂ ಒಟ್ಟಿಗೇ ನೋಡಿ ಸಂಭ್ರಮಿಸುತ್ತಿದ್ದೆವು. ಹಾಗೆ ಅವಳನ್ನು ನಾವಿಬ್ಬರೂ ಒಟ್ಟಿಗೇ ಕೂಡಿ ನೋಡುವುದರಲ್ಲಿ ನಮಗೆ ಯಾವ ಅಸೂಯೆಯೂ ಇರಲಿಲ್ಲ. ಹೇಗೆ ಒಟ್ಟಿಗೆ ಕೂಡಿಯಾಡಿ ನಾವಿಬ್ಬರೂ ಮಾಡುಹೊಳೆಯಲ್ಲಿ ಈಜುತ್ತಿದ್ದೆವೋ, ಇಲ್ಲ ರಾತ್ರಿ ಬಾನಿನಲಿ ಮೂಡುವ ಚಂದಿರನನ್ನು ನೋಡಿ, ಅವನು ನಮ್ಮ ತೆಕ್ಕೆಗೆ ಸಿಕ್ಕಿದರೆ ಎಷ್ಟು ಚೆಂದವೆಂದು ಕನಸುತ್ತಿದ್ದೆವೋ, ಬೆಳಗ್ಗೆ ಬಯಲಿನಲಿ ಹಾರಾಡುವ ತುಂಬಿಗಳನ್ನು ಹಿಡಿವಾಟದಲ್ಲಿ ತೊಡಗುತ್ತಿದ್ದೆವೋ ಅಷ್ಟೇ ಸಹಜವಾಗಿ, ಅಷ್ಟೇ ಆಪ್ತವಾಗಿ ನಾವು ಪ್ರಭಾಳನ್ನೂ, ಅವಳ ಚೆಲುವಿನ ನಡೆಯನ್ನೂ ನೋಡಿ ಆಸ್ವಾದಿಸುತ್ತಿದ್ದೆವು. ಆದರೆ ಬಾಲ್ಯ ಮೆಲ್ಲಗೆ ಪೊರೆಕಳಚುತ್ತ ಹೊಸ ಯೌವನ ಸಣ್ಣಗೆ ಮೈಗೂಡುತ್ತಿದ್ದಂತೆ ಪ್ರಭಾಳ ಚೆಲುವು ಬೇರೆಯೇ ಬಗೆಯಲ್ಲಿ ಕಾಣತೊಡಗಿ, ಅವಳು ನಮ್ಮಿಬ್ಬರಲ್ಲಿ ತಿರುಗಿ ಯಾರನ್ನು ನೋಡಬಹುದೆಂಬ ಕುತೂಹಲವನ್ನು ಒಳಗೊಳಗೇ ಅದುಮಿಟ್ಟುಕೊಂಡು ಹೊರಗೆ ಎಂದಿನ ಪ್ರಶಾಂತತೆಯನ್ನು ಕಾಯ್ದುಕೊಳ್ಳುತ್ತಿದ್ದೆವು. ಅವಳು ಮಾತ್ರ ನಮ್ಮಿಬ್ಬರನ್ನೂ ಹಾಗೆಲ್ಲ ಯಾವ ವಿಶೇಷ ಭಾವದಿಂದಲೂ ನೋಡಲಿಲ್ಲ. ಹಾಗಿರುವಾಗಲೇ ಬಾಪುಟ್ಟಿ ಗಾಡಿ ತೆಗೆದುಕೊಂಡು ಮೀನು ವ್ಯಾಪಾರಕ್ಕೆ ಇಳಿದದ್ದು. ಅವನಿಗಿಂತ ಚಿಕ್ಕವನಾದ ನಾನು ಇನ್ನೂ ಗೌರ್ಮೆಂಟು ಹೈಸ್ಕೂಲಿಗೆ ಹೋಗುತ್ತಿದ್ದೆ. ಬಾಪುಟ್ಟಿ ಹತ್ತನೇ ತರಗತಿಯ ಮೇಲೆ ಓದಬೇಕೆಂದು ಯಾವತ್ತಿಗೂ ಬಯಸಿರಲಿಲ್ಲ. ಅದಕ್ಕೇ ಅವನಿಗೆ ತಿಕ್ಕುಮುಕ್ಕಾಡುವಂತಾಗಿತ್ತು. ನನ್ನ

